ಓ ಎಸ್ ನಂಬರ 107/2011
ಪಿ ಡಬ್ಲ್ಯೂ -4

**ದಿನಾಂಕಃ 09.01.2025.**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.
ಮುಂದುವರೆದ **ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ವಿ ವಾಯ್. ವಕೀಲರಿಂದಃ**

1. ಈ ದಾವೆಯನ್ನು ಹೂಡುವ ಸಮಯದಲ್ಲಿ ಆಸ್ತಿಯ ಉತಾರವನ್ನು ನೋಡಿರುತ್ತೇನೆ. ಆಗ ದಾವಾ ಸ್ವತ್ತು ಮಲ್ಲವ್ವ ಶಿವರಾಯಪ್ಪ ಕೋಲಕಾರ ರವರ ಹೆಸರಿನಲ್ಲಿತ್ತು. ಸರ್ವೇ ನಂಬರ ನನಗೆ ನೆನಪಿರುವುದಿಲ್ಲ. ದಾವಾ ಸ್ವತ್ತಿನ ಚೆಕಬಂಧಿ ಪೂರ್ವಕ್ಕೆ ಅಲಿಸಾಬ, ಪಶ್ಚಿಮಕ್ಕೆ ಉಗರಕೋಡ, ದಕ್ಷಿಣಕ್ಕೆ ಅಲಿಸಾಬ ರವರ ಸ್ವತ್ತು ಹಾಗೂ ಉತ್ತರಕ್ಕೆ ಅಲಿಸಾಬ ರವರ ಸ್ವತ್ತು ಇರುತ್ತದೆ.

2. ದಾವೆಯನ್ನು ಎಷ್ಟನೇ ಇಸ್ವಿಯಲ್ಲಿ ದಾಖಲು ಮಾಡಿರುತ್ತೇವೆ ಎಂದು ನನಗೆ ಗೊತ್ತಿರುವುದಿಲ್ಲ, ನನ್ನ ಸಹೋದರ ಮಾಡಿರುತ್ತಾರೆ. ನನಗೆ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ದಾವೆ ಮಾಡುವ ಪೂರ್ವದಲ್ಲಿ ದಿನಾಂಕ 12.07.2010 ರಂದು ವಕೀಲರ ಮೂಲಕ ನೋಟಿಸ ನೀಡಿದ್ದೇವು ಎಂದರೆ ಸರಿ. ಸದರಿ ನೋಟಿಸನ್ನು ದೇವಲಾಪೂರ ಹೌಸಿಂಗ್ ಕಾಲನಿಗೆ ಕಳುಹಿಸಿರುತ್ತೇವೆ. ಸಾಕ್ಷಿಗೆ ನಿಶಾನೆ ಪಿ 3 ನ್ನು ತೋರಿಸಿದ್ದು, ಸದರಿ ನೋಟಿಸ ನಿಮ್ಮ ವಕೀಲರು ಕಳುಹಿಸಿದ ನೋಟಿಸ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ, ಅವರು ಕಳುಹಿಸಿರುತ್ತಾರೆ ಎನ್ನುತ್ತಾರೆ. ಸಾಕ್ಷಿಗೆ ನಿಶಾನೆ ಪಿ 3 ನ್ನು ತೋರಿಸುತ್ತಿದ್ದು, ಅದರಲ್ಲಿ ವಿಳಾಸ ಏನು ಬರೆದಿರುತ್ತಾರೆ ಎಂದರೆ ಸಾಃ ಹಿರೇಮುಲಕೋರು, ಹಾಲಿ ವಸತಿ ಬೈಲಹೊಂಗಲ ಎಂದು ಮಾತ್ರ ಬರೆದಿರುತ್ತಾರೆ. ನಿಶಾನೆ ಪಿ 6ಎ ರಲ್ಲಿ ವಿಳಾಸ ಬಸವೇಶ್ವರ ಆಶ್ರಯ ಕಾಲನಿ, ಜನತಾ ಪ್ಲಾಟ ದೇವಲಾಪೂರ ರೋಡ, ಬೈಲಹೊಂಗಲ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಶಾನೆ ಪಿ 6ಎ ರಲ್ಲಿ ನಮೂದಿಸಿರುವ ವಿಳಾಸದಲ್ಲಿ ಪ್ರತಿವಾದಿ ನಂಬರ 1 ರವರು ವಾಸಿಸುತ್ತಿದ್ದರು ಎಂದರೆ ಸರಿ. ನಿಶಾನೆ ಪಿ 8 ಮರಣ ಪ್ರಮಾಣ ಪತ್ರದಲ್ಲಿ ಆಕೆಯ ವಿಳಾಸ ಆಶ್ರಯ ಕಾಲನಿ, ದೇವಲಾಪೂರ ರೋಡ, ಬೈಲಹೊಂಗಲ ಎಂದು ನಮೂದು ಇರುತ್ತದೆ ಎಂದರೆ ಸರಿ. 2011 ರಲ್ಲಿ ದಾವೆ ಹೂಡುವ ಸಮಯದಲ್ಲಿ ಪ್ರತಿವಾದಿ ನಂಬರ 1ರವರು ಮರಣ ಹೊಂದಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆಯನ್ನು ಹೂಡುವ 8-10 ದಿನಗಳ ಮೊದಲು 1ನೇ ಪ್ರತಿವಾದಿಯು ನನಗೆ ಭೇಟ್ಟಿಯಾಗಿದ್ದರು.

2. ನಾವು ನೋಟಿಸನ್ನು 12.07.2010 ಕ್ಕೆ ಕಳುಹಿಸಿರುತ್ತೇವೆ ಹಾಗೂ ಸದರಿ ನೋಟಿಸ 13.07.2010 ರಂದು ವಾಪಸ್ಸ ಬಂದಿರುತ್ತದೆ ಎಂದು ವಾದ ಪತ್ರದಲ್ಲಿ ಹೇಳಿರುತ್ತೇವೆ ಎಂದರೆ ಸರಿ. ಅಂಚೆ

ಇಲಾಖೆಯವರು ಯಾವುದೇ ಆರ್ ಪಿ ಎ ಡಿ ನೋಟಿಸನ್ನು 7 ದಿನಗಳ ವರೆಗೆ ಇಟ್ಟುಕೊಂಡು ನಂತರ ಕಳುಹಿಸುತ್ತಾರೆ ಎಂದರೆ ಸಾಕ್ಷಿ ಪರಸ್ಥಳಕ್ಕೆ ಹೋಗಿದ್ದರೆ ಅಕ್ಕಪಕ್ಕದವರನ್ನು ಕೇಳಿಕೊಂಡು ಆಗಲೇ ಕಳುಹಿಸುತ್ತಾರೆ ಎನ್ನುತ್ತಾರೆ. 1 ನೇ ಪ್ರತಿವಾದಿ ಮರಣ ಹೊಂದಿದ್ದು, ತಮಗೂ ತಿಳಿದಿತ್ತು, ಪೋಸ್ಟಮನ್ ಗೂ ಸಹ ಹೇಳಿದ್ದೀರಿ ಆದಕಾರಣ 1 ದಿನದಲ್ಲಿ ಆತ ವಾಪಸ್ಸ ಕಳುಹಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ನೋಟಿಸ ಜಾರಿಯಾಗದ ಕಾರಣ 2 ನೇ ನೋಟಿಸ ಕಳುಹಿಸಿರುತ್ತೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಹಿರೇಮಲಕೂರಿಗೆ ಹೋಗಿ 1 ನೇ ಪ್ರತಿವಾದಿ ಎಲ್ಲಿ ಇರುತ್ತಾರೆ ಎಂದು ವಿಚಾರಣೆ ಮಾಡಿರುವುದಿಲ್ಲ. ಸದರಿ ರೀತಿ ವಿಚಾರಣೆ ಮಾಡಲು ತೊಂದರೆ ಇರಲಿಲ್ಲ. ನಿಶಾನೆ ಪಿ 3 ನೋಟಿಸನಲ್ಲಿ ಎಷ್ಟು ದಿನಗಳಲ್ಲಿ ಖರೀದಿ ಕೊಡಬೇಕು ಎಂದು ಹೇಳಿರುವುದಿಲ್ಲ. ನಿಶಾನೆ ಪಿ 3 ರಲ್ಲಿ ದಿನಾಂಕ 27.07.2010 ರಲ್ಲಿ ಬಾಕಿ ಉಳಿದ ಮೊತ್ತವನ್ನು ಪಡೆದುಕೊಂಡು ಖರೀದಿ ಬರೆದುಕೊಡಬೇಕು ಎಂದು ನೋಟಿಸ ನೀಡಿರುತ್ತೀರಿ ಎಂದರೆ ಸಾಕ್ಷಿ ವಕೀಲರಿಗೆ ಗೊತ್ತು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವು ನೋಟಿಸ ನೀಡಿದ ಒಂದು ತಿಂಗಳ ಒಳಗಾರಿ ಕೇಸ ದಾಖಲಿಸಬೇಕಾಗಿತ್ತು, ಆದರೆ ದಿನಾಂಕ 20.04.2011 ರಂದು ದಾಖಲಿಸಿರುತ್ತೀರಿ ಎಂದರೆ ಸರಿ. ದಿನಾಂಕ 28.07.2010 ರಿಂದ 20.04.2011 ರ ಅವಧಿಯಲ್ಲಿ 1 ನೇ ಪ್ರತಿವಾದಿ ಯಾಕೆ ಬರೆದುಕೊಟ್ಟಿರುವುದಿಲ್ಲ, ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ವಾದಿ ಮಹಾಂತೇಶ ಪ್ರಕಾಶ ನನ್ನು ಭೇಟ್ಟಿಯಾಗುತ್ತಿದ್ದರು ಆದಕಾರಣ ವಿಚಾರಣೆ ಮಾಡಿರುವುದಿಲ್ಲ ಎನ್ನುತ್ತಾರೆ. ನಿಮಗೆ 1 ನೇ ಪ್ರತಿವಾದಿ ಮರಣವಾಗಿರುವುದು ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ 09.10.2006 ರಲ್ಲಿ ಎನ್ನುತ್ತಾರೆ. 1 ನೇ ಪ್ರತಿವಾದಿ ತೀರಿಕೊಂಡ ಬಳಿಕ ಈ ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿ. ನಿಶಾನೆ ಪಿ 9ನ್ನು ಯಾವ ಕಾರಣಕ್ಕಾಗಿ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ, ವಕೀಲರಿಗೆ ಗೊತ್ತಿರುತ್ತದೆ ಎನ್ನುತ್ತಾರೆ. ನಿಶಾನೆ ಪಿ 13 ರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಶಾನೆ ಪಿ 13 ರ ಆದೇಶವಾದ ನಂತರ ಡಿ ಸಿ ಕಚೇರಿಯಲ್ಲಿ ಏನು ಆಗಿರುತ್ತದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನನ್ನ ವಕೀಲರಿಗೆ ಗೊತ್ತು, ವಾದಿಗೆ ಗೊತ್ತು ಎನ್ನುತ್ತಾರೆ. ಬೈಲಹೊಂಗಲ ತಲಾಟೆಯವರಿಂದ ಒಂದು ದಾಖಲೆ ತಂದು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೀರಾ ಎಂದರೆ ಸರಿ. ಆಸ್ತಿ ಇರುವುದು ಹಿರೇಮಲಕೂರಿನಲ್ಲಿ, ಹಿರೇಮಲಕೂರಿನ ತಲಾಟಿ ವಾರಸುದಾರರು ಇಲ್ಲ ಎಂದು ವರದಿ ನೀಡಬೇಕಾಗಿತ್ತು ಎಂದರೆ ಸಾಕ್ಷಿ ಅವರು ಬೈಲಹೊಂಗಲದಲ್ಲಿಯು ಇರುತ್ತಾರೆ, ಹಿರೇಮಲಕೂರಿನಲ್ಲಿಯು ಇರುತ್ತಾರೆ. ಮೃತ 1 ನೇ ಪ್ರತಿವಾದಿಗೆ ಬಸವಣೆಪ್ಪಾ ಎಂಬ ಮಗಳು ಇರುತ್ತಾರೆ ಆಕೆ ಹಿರೇಮಲಕೂರಿನಲ್ಲಿ ವಾಸವಿದ್ದರು ಎಂದರೆ ಸಾಕ್ಷಿ ಯಾರು ವಾರಸುದಾರರು ಇರುವುದಿಲ್ಲ ಎನ್ನುತ್ತಾರೆ. ಬಸವಣೆಪ್ಪ ರವರ ಮಗನೇ ಪ್ರತಿವಾದಿ ನಂಬರ 2 ಎಂದರೆ ಸರಿಯಲ್ಲ.

3. ಪ್ರತಿವಾದಿ ನಂಬರ 2 ರವರಿಗೆ ದಾವಾ ಸ್ವತ್ತಿನಲ್ಲಿ ಹೆಸರನ್ನು ಹಚ್ಚಿಕೊಳ್ಳಲು ದೇಮಪ್ಪ ಕೊಲಕಾರ ಅಡ್ಡಿಪಡಿಸಿದ್ದರು ಎಂದರೆ ಸರಿಯಲ್ಲ. ಸದರಿಯವರು ತಕರಾರು ಮಾಡಿದ ಕಾರಣ ನ್ಯಾಯಾಲಯದಿಂದ ಡಿಕ್ರಿ ಪಡೆದುಕೊಂಡು, ತಮ್ಮ ಹೆಸರನ್ನು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ 2 ಈಗ ಸಂಗೊಳ್ಳಿಯಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ ನಂಬರ 2 ರವರು ಸಂಗೋಳ್ಳಿಯಲ್ಲಿ ಇರುವ ಕಾರಣ ಬಂದು ಉಳುಮೆ ಮಾಡಲು ಆಗುವುದಿಲ್ಲ ಎಂದು, ಆಸ್ತಿಯನ್ನು ಪ್ರತಿವಾದಿ ನಂಬರ 3 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರು ವಾರಸುದಾರರೇ ಅಲ್ಲ ಎನ್ನುತ್ತಾರೆ. ನೀವು ಮೃತ 1 ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಖೊಟ್ಟಿ ನಿಶಾನೆ ಪಿ 2 ಮತ್ತು 7 ನ್ನು ಸೃಷ್ಟಿಸಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಮೃತ ಮಲ್ಲವ್ವ ಎಂದಿಗೂ ನಿಶಾನೆ ಪಿ 2 ರಂತೆ ಖರೀದಿ ಕರಾರು ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

sd/-

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ

**18-12-2024**